ಕ್ರ ಸಂ	ಹುದ್ದೆಗಳ ವಿವರ	ಮಂಜೂರಾದ ಹುದ್ದೆಗಳು	ಖಾಲಿಯಿರುವ ಹುದ್ದೆಗಳು
1	ನಿಲಯ ಪಾಲಕರು	2	2
2	ನಿಲಯ ಮೀಲ್ವಿಚಾರಕರು	3	0
3	ಅಡುಗೆಯವರು	10	4
4	ಅಡುಗೆ ಸಹಾಯಕರು	5	3
5	ರಾತ್ರಿ ಕಾವಲುಗಾರರು	2	1
	ಒಟ್ಟು	22	10

(ಈ) ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಒಟ್ಟು1264 ಹುದ್ದೆಗಳು ಖಾಲಿ ಇರುತ್ತವೆ

ಇದಲ್ಲದೇ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಒಟ್ಟು 1209 ಹುದ್ದೆಗಳು ಖಾಲಿ ಇರುತ್ತವೆ

ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಆರ್ಥಿಕ ಮಿತವ್ಯಯ ಆದೇಶವನ್ನು ಸಡಲಿಸಿ ಭರ್ತಿ ಮಾಡುವ ಬಗ್ಗೆ ಪರಿಶೀಲನೆಯಲ್ಲಿದೆ

671 (910) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) – ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಮೈಸೂರಿನ ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಸೇರಿದ ವಸತಿ ಗೃಹಗಳ ಸಂಖ್ಯೆ ಎಷ್ಟು , ಈ ವಸತಿ ಗೃಹಗಳನ್ನು ಯಾರ್ಯಾರಿಗೆ ಮಂಜೂರು ಮಾಡಲಾಗಿದೆ ತಿಳಿಸಿ ,

(ಆ) ಮೈಸೂರಿನ ವೈದ್ಯಕೀಯ ಕಾಲೇಜಿನ ಸಿಬ್ಬಂದಿಗಳಿಂದ ವಸತಿ ಗೃಹ ಮಂಜೂರಾತಿ ಕೋರಿ ಬಂದಿರುವ ಅರ್ಜಿಗಳು ವಿಲೇವಾರಿಯಾಗದೇ ಬಾಕಿ ಇರುವ ಅರ್ಜಿಗಳ ಸಂಖ್ಯ ಎಷ್ಟು ,

(ಇ) ಸದರಿ ಬಾಕಿ ಅರ್ಜಿಗಳ ಅಭ್ಯರ್ಥಿಗಳ ಹೆಸರು, ಹುದ್ದೆ, ಅವರುಗಳು ಎಷ್ಟು ವರ್ಷಗಳಿಂದ ವಸತಿ ಗೃಹಕ್ಕಾಗಿ ಎಷ್ಟು ಭಾರಿ ಅರ್ಜಿ ಸಲ್ಲಿಸಿರುವರು (ವಿವರ ಒದಗಿಸುವುದು) ,

(ಈ) ವಸತಿ ಗೃಹ ಮಂಜೂರಾತಿಗೆ ಅನುಸರಿಸಲಾಗುವ ಮಾನದಂಡವೇನು ,

(ಉ) ಬಾಕಿ ಇರುವ ಅರ್ಜಿ ವಿಲೇವಾರಿಗೆ ಎಷ್ಟು ಸಮಯ ಬೇಕಾಗುವುದು ?

ಶ್ರೀ ಡಾ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) –

(ಅ) 36 ಅವುಗಳಲ್ಲಿ ವೈದ್ಯರಿಗೆ 12 ಗ್ರೂಪ್ ಸಿ ನೌಕರರಿಗೆ 20, ಡಿ ಗುಂಪಿನ ನೌಕರರಿಗೆ 4

(ಆ) 39

(ಇ) ಡಾ ಉದಯಶಂಕರ್ 3 ವರ್ಷಗಳಿಂದ 3 ಬಾರಿ ವೈದ್ಯರು

ಡಾ ಪಿ ಗೋಪಿನಾಥ್ 3 ವರ್ಷಗಳಿಂದ 2 ಬಾರಿ ವೈದ್ಯರು

ಡಾ ಎಸ್ ಕಾವ್ಯತರಾಜ್ 2 ವರ್ಷಗಳಿಂದ 2 ಬಾರಿ ವೈದ್ಯರು

ಡಾ ಮುದಾಸೀರ್ ಅಜೀಜ್ 3 ವರ್ಷಗಳಿಂದ 1 ಬಾರಿ ವೈದ್ಯರು

ಡಾ ನೀಲನಗೌಡ ಡಿ 2 ವರ್ಷಗಳಿಂದ 1 ಬಾರಿ

ಪೋಲೀಸ ಪಾಟೀಲ್ ವೈದ್ಯರು

ಡಾ ಸುನೀಲ್ ಕುಮಾರ್ 2 ವರ್ಷಗಳಿಂದ 1 ಬಾರಿ ವೈದ್ಯರು

ಡಾ ಸೈಯದ್ ಮೊಹಿಸಿನ್ ಅಹಮ್ಮದ್ 2 ವರ್ಷಗಳಿಂದ 1 ಬಾರಿ ವೈದ್ಯರು

ಡಾ ಮಂಜುನಾಥ್ 2 ವರ್ಷಗಳಿಂದ 1 ಬಾರಿ

ಡಾ ಹೆಚ್ ಎಸ್ ಪ್ರಕಾಶ್ 2 ವರ್ಷಗಳಿಂದ 1 ಬಾರಿ ವೈದ್ಯರು

ಡಾ ಪಿ ಎಸ್ ಕಲಾದಗಿ 1 ವರ್ಷದಿಂದ 1 ಬಾರಿ ವೈದ್ಯರು

ಡಾ ಶಶಿಧರ್ 1 ವರ್ಷದಿಂದ 1 ಬಾರಿ ವೈದ್ಯರು

ಡಾ ಎಸ್ ಎಸ್ ರಮೇಶ್ 1 ವರ್ಷದಿಂದ 1 ಬಾರಿ ವೈದ್ಯರು

ಡಾ ಶ್ರೀನಿವಾಸ್ ಕುಲಕರ್ಣಿ 1 ವರ್ಷದಿಂದ 1 ಬಾರಿ ವೈದ್ಯರು

ಅಲ್ಲದೆ, 26 ಜನ ಸಿ ಗುಂಪಿನ ನೌಕರರು 1997ರಿಂದ ಇದುವರೆವಿಗೂ ವಸತಿ ಗೃಹ ಕೋರಿ ಒಂದು ಬಾರಿ ಅರ್ಜಿ ಸಲ್ಲಿಸಿರುತ್ತಾರೆ

(ಈ) ವಸತಿ ಗೃಹಗಳು ಖಾಲಿ ಆದ ಲಕ್ಷಣ ಆಯಾಯ ವೃಂದದಲ್ಲಿ ನೋಂದಣಿ ಮಾಡಿಸಿದವರಿಗೆ ಜೇಷ್ಠತೆ ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು

673 (912) ಶ್ರೀ ಶಂಕರಲಿಂಗೇಗೌಡ ಹೆಚ್ ಹೆಸ್ (ಚಾಮರಾಜ) – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಮೈಸೂರು ನಗರದಲ್ಲಿರುವ ಸರಸ್ವತಿಪುರಂ ಪ್ರಾಥಮಿಕ ಆರೋಗ್ಯ ಘಟಕ/ಕೇಂದ್ರ ಪ್ರಾರಂಭವಾದದ್ದು ಯಾವಾಗ ,

(ಆ) ಈ ಘಟಕ/ಕೇಂದ್ರದ ಅತ್ಯಂತ ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

(ಇ) ಹಾಗಿದ್ದಲ್ಲಿ, ಈ ಕಟ್ಟಡದ ದುರಸ್ಥಿಯ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

(ಅ) ಮೈಸೂರು ನಗರದಲ್ಲಿರುವ ಸರಸ್ವತಿಪುರಂ ಪ್ರಾಥಮಿಕ ಆರೋಗ್ಯ ಘಟಕ ಪ್ರಾರಂಭವಾದದ್ದು ದಿನಾಂಕ 2–11–1951

(ಆ) ಬಂದಿದೆ

(ಇ) ಸದರಿ ಘಟಕದ ಕಟ್ಟಡದ ದುರಸ್ತಿಗಾಗಿ ಅಂದಾಜು ಪಟ್ಟಿ ತಯಾರಿಸಿ ಕಳುಹಿಸಲು ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ತಾಂತ್ರಿಕ ವಿಭಾಗ ಮೈಸೂರು ಇವರಿಗೆ ತಿಳಿಸಲಾಗಿದೆ ಅದು ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು